# ಬಲೆಯಿಂದ ಬುದ್ಧನಡಿಗೆ

ಪ್ರೇಮಕ್ಕೆ ಅದಮ್ಯವಾದ ವಿಚಿತ್ರ ಶಕ್ತಿ ಇರುವಂತೆ ಮೀರಲಾಗದ ದೌರ್ಬಲ್ಯಗಳಿರುವುದೂ ಸತ್ಯದ ಸಂಗತಿ. ಈ ಪ್ರೇಮಿಗಳು ತಮ್ಮನ್ನು ಪ್ರೇಮಿಸುವವರಿಗಾಗಿ ಏನನ್ನಾದರೂ ಮಾಡಬಲ್ಲರು ಹಾಗೂ ತೊರೆಯಬಲ್ಲರು. ಪ್ರೇಮದ ಹಾದಿಯಲ್ಲಿ ತರ್ಕಗಳಿಗೆ ಸ್ಥಳವಿಲ್ಲ. ಜಾತಿ–ಮತಗಳ ಭೇದವಿಲ್ಲ. ಕೇವಲ ಮನಸು ಬಯಸಿದ್ದನ್ನು, ಮನಸ್ಸನ್ನು ನಿಗ್ರಹಿಸಲಾಗದು ಎಂಬುದನ್ನು ಪಡೆದೇ ತೀರುವೆನೆಂಬ ಹಠ ಪ್ರೇಮ–ಪರಿಣಾಮ ಪ್ರಸಂಗಗಳಲ್ಲಿ ಎದ್ದು ಕಾಣುತ್ತವೆ. ತೊರೆಯಲಾಗದ, ಪಡೆಯಲಾಗದ ವಿಚಿತ್ರ ಭಾವವ್ಯಾಪಾರಗಳು ಸಾಮಾನ್ಯರನ್ನು ಅಷ್ಟೇಕೆ ಸಾಧು ಸನ್ಯಾಸಿಗಳನ್ನು ಸಹ ಬಿಟ್ಟಿಲ್ಲ. ಕೆಲವರು ಮಾತ್ರ ಈ ಸಂಘರ್ಷಗಳನ್ನು ಮೀರಬಲ್ಲರು ದೃಢವಾಗಿ ನಿಲ್ಲಬಲ್ಲರು.

ಒಮ್ಮೆ ಬುದ್ಧ ಶ್ರಾವಸ್ತಿಯ ಜೇತವನದಲ್ಲಿ ನೆಲೆಸಿದ್ದಾಗ ಆನಂದ ನಗರದಲ್ಲಿ ಭಿಕ್ಷಾಟನೆಗೆ ತೆರಳಿದ್ದ. ಭಿಕ್ಷಾನ್ನ ಸೇವಿಸಿದ ನಂತರ ನದಿಗೆ ನೀರು ಕುಡಿಯಲು ಹೋದಾಗ ಕೆಳವರ್ಗಕ್ಕೆ ಸೇರಿದ ಪ್ರಕೃತಿಯೆಂಬ ಕನ್ಯೆ ಮಡಿಕೆಯಿಂದ ನೀರು ತುಂಬುತ್ತಿರುತ್ತಾಳೆ. ಆನಂದ ನೀರು ಕೇಳಿದಾಗ ತಾನೊಬ್ಬ ಚಾಂಡಾಲಿ ಎಂದು ನೀರು ಕೊಡಲು ನಿರಾಕರಿಸುತ್ತಾಳೆ. ನಿನ್ನ ಜಾತಿಗಿಂತ ನೀನು ಕೊಡುವ ನೀರು ಮುಖ್ಯ ಎಂದು ನೀರು ಕುಡಿದು ಆನಂದ ಬುದ್ಧನಲ್ಲಿಗೆ ತೆರಳುತ್ತಾನೆ. ಆನಂದನನ್ನು ಪ್ರೀತಿಸಲಾರಂಭಿಸಿದ ಪ್ರಕೃತಿ ಅವನನ್ನು ಹಿಂಬಾಲಿಸಿ ಆತ ಬುದ್ಧನ ಶಿಷ್ಯ ಎಂಬುದನ್ನು ಅರಿತುಕೊಳ್ಳುತ್ತಾಳೆ.

ತನ್ನ ತಾಯಿಯಲ್ಲಿಗೆ ತೆರಳಿದ ಪ್ರಕೃತಿ ಅವನನ್ನು ಬಿಟ್ಟು ಯಾರನ್ನೂ ವಿವಾಹವಾಗೆನು ಎಂದು ಹಠ ಹಿಡಿಯುತ್ತಾಳೆ. ಯಕ್ಷಿಣಿ ವಿದ್ಯೆಯನ್ನು ಬಲ್ಲ ತನ್ನ ತಾಯಿಗೆ ತನ್ನ ಪ್ರೇಮ ಕೈಗೂಡುವುದಕ್ಕೆ ಆ ವಿದ್ಯೆಯನ್ನು ಬಳಸು ಎಂದು ಬೇಡುತ್ತಾಳೆ. ಅದರಂತೆ ತಾಯಿ ಆನಂದನನ್ನು ಭೋಜನಕ್ಕೆ ಆಹ್ವಾನಿಸುತ್ತಾಳೆ. ತನ್ನ ಮಗಳ ಪ್ರೇಮ ಹಾಗೂ ವಿವಾಹದ ಬಯಕೆಯನ್ನು ಅವನ ಮುಂದಿಡುತ್ತಾಳೆ. ಆನಂದ ತಾನು ಬ್ರಹ್ಮಚಾರಿಯೆಂದೂ ತಾನು ಯಾವ ಸ್ತ್ರೀಯೊಂದಿಗೆ ವಿವಾಹವಾಗಲಾರೆನೆಂದು ಪ್ರಕೃತಿಯನ್ನು ನಿರಾಕರಿಸುತ್ತಾನೆ. ಈ ನಿರಾಕರಣೆಯಿಂದ ಅವಳ ಪ್ರೇಮ– ಬೆಂಕಿಯಂತೆ ಜ್ವಲಿಸಲಾರಂಭಿಸುತ್ತದೆ. ತನ್ನನ್ನು ನಿರಾಕರಿಸಿದ ಅವನನ್ನು ಹೇಗಾದರೂ ಪಡೆಯಲೇಬೇಕೆಂಬ ಹಠದಿಂದ ಪ್ರಕೃತಿ ಅಲ್ಲಿಂದ ಹೊರಗೆ ಹೋಗದಂತೆ ತಡೆಯುತ್ತಾಳೆ. ತನ್ನ ಯೌವನ ಮತ್ತು ಚೆಲುವಿನಿಂದ ಗೆಲ್ಲಲು ಪ್ರಯತ್ನಿಸುತ್ತಾಳೆ. ಆನಂದ ಎಂದಿನಂತೆ ತಟಸ್ಥನಾಗಿದ್ದ.

ಕೊನೆಗೆ ಅವಳ ತಾಯಿ ತನ್ನ ಯಕ್ಷಿಣಿ ವಿದ್ಯೆ ಪ್ರಯೋಗಿಸುತ್ತಾಳೆ. ಕೊಠಡಿಯ ತುಂಬಾ ಬೆಂಕಿಯ ಜ್ವಾಲೆ. ಆ ಜ್ವಾಲೆ ಪ್ರಕೃತಿಯ ಪ್ರೇಮದ ಜ್ವಾಲೆಗೆ ಇನ್ನಷ್ಟು ಕಿಚ್ಚಿಟ್ಟಿತೇ ವಿನಹ ಆನಂದನನ್ನು ತಟ್ಟಲೂ ಇಲ್ಲ, ದಹಿಸಲೂ ಇಲ್ಲ. ಅಸಹಾಯಕಳಾದ ತಾಯಿ– ಮಗಳಿಂದ ಬಿಡುಗಡೆಗೊಂಡ ಆನಂದ ಬುದ್ಧನಲ್ಲಿಗೆ ಬರುತ್ತಾನೆ. ನಡೆದ ಸಂಗತಿಯನ್ನು ಅವನಿಗೆ ವರದಿ ಮಾಡುತ್ತಾನೆ. ಮತ್ತೆ ಮರುದಿನವೇ ಬುದ್ಧನಿದ್ದ ಜೇತವನಕ್ಕೆ ಬಂದ ಪ್ರಕೃತಿ ಆನಂದನನ್ನು ಹುಡುಕಲು ಆರಂಭಿಸುತ್ತಾಳೆ. ಅವನನ್ನು ಬಿಡದೆ ಹೋದಲೆಲ್ಲಾ ಹಿಂಬಾಲಿಸುತ್ತಾಳೆ. ಬುದ್ಧನಲ್ಲಿಗೆ ಬಂದ ಆನಂದ ಆ ಹುಡುಗಿ ಏಕೆ ನನ್ನನ್ನು ಬಿಡದೆ ಕಾಡುತ್ತಾಳೆ ಎಂದು ಪ್ರಶ್ನಿಸುತ್ತಾನೆ. ಬುದ್ಧ ಅವಳನ್ನು ಕರೆಸಿ 'ಏತಕ್ಕಾಗಿ ಆನಂದನ್ನು ಕಾಡುವೆ' ಎಂದು ಕೇಳುತ್ತಾನೆ. ತನ್ನ ವಿವಾಹದ ಬಯಕೆಯನ್ನು ಪ್ರಕೃತಿ ವ್ಯಕ್ತಪಡಿಸುತ್ತಾಳೆ. ಬುದ್ಧ 'ಆನಂದ ಒಬ್ಬ ಭಿಕ್ಷು. ಅವನಂತೆ ನೀನು ಕೂದಲನ್ನು ತೆಗೆಸಿ ಬಂದರೆ ನೀನು ಏನು ಮಾಡಬಹುದು ಎಂಬುದನ್ನು ಹೇಳುತ್ತೇನೆ' ಎನ್ನುತ್ತಾನೆ. ಕೂದಲು ತೆಗೆಸುವುದು ಭಿಕ್ಷುಣಿಯಾಗುವುದರ ಮೊದಲ ಹಂತ ಎಂಬುದನ್ನು ಅರಿಯದ ಆಕೆ ಕೂದಲು ತೆಗೆಸಿ ಬುದ್ಧನಲ್ಲಿಗೆ ಬರುತ್ತಾಳೆ. ಬುದ್ಧ ನೇರವಾಗಿ 'ನಿನಗೇನು ಬೇಕು. ಆನಂದನ ಶರೀರದ ಯಾವ ಭಾಗ ನಿನಗೆ ಸಂತೋಷ ಕೊಡುತ್ತದೆ' ಎಂದು ಕೇಳುತ್ತಾನೆ.

ಆನಂದನ ವ್ಯಾಮೋಹದಲ್ಲಿ ಮುಳುಗಿದ ಪ್ರಕೃತಿ ಅವನ ಮೂಗು, ಬಾಯಿ, ಕಿವಿ, ಧ್ವನಿ, ನಡಿಗೆ ಇದೆಲ್ಲದರ ಆಕರ್ಷಣೆಯನ್ನು ಬಿಚ್ಚಿಡುತ್ತಾಳೆ. ಹೆಣ್ಣ ಸಹಜ ಸಂಕೋಚವನ್ನು ಮೀರಿದ ಪ್ರೇಮವನ್ನು ಗಮನಿಸಿದ ಬುದ್ಧ ಶರೀರದ ಅನಿತ್ಯತೆಯನ್ನು ತಿಳಿಸಿಕೊಡುತ್ತಾನೆ. ಕಣ್ಣು ಕಣ್ಣೀರ ನಿವಾಸ, ಮೂಗು ಗೊಣ್ಣೆಯ ತಾಣ, ಬಾಯಿ ಎಂಜಲಿನ ಮೂಲ, ಕಿವಿಗಳು ಕೊಳೆಯ ತೇರುಮನೆ, ಶರೀರ ಮಲಮೂತ್ರಗಳ ತೊಟ್ಟಿಯಂತಿದೆ. ಸ್ತ್ರೀ ಪುರುಷರು ಕೂಡಿದರೆ ಮಕ್ಕಳ ಜನನ, ಜನನದ ಹಿಂದೆ ಸಾವು, ಸಾವಿನ ಜೊತೆಯಲ್ಲಿ ಸಂಕಟ ತಪ್ಪಿದ್ದಲ್ಲ. ಹೀಗಿದ್ದಾಗ ಆನಂದನನ್ನು ಪಡೆಯುವುದರಲ್ಲಿ ಯಾವ ಸುಖವಿದೆ. ಯೋಚಿಸು ಹುಡುಗಿ ಎನ್ನುತ್ತಾನೆ. ಶರೀರದ, ಸಂಸಾರದ ಅನಿತ್ಯತೆಯನ್ನು ಬುದ್ಧ ಸರಳವಾದ ಮಾತುಗಳಿಂದಲೇ ಅವಳಿಗೆ ತಿಳಿಸಿದ್ದ. ತನ್ನಲ್ಲಿರುವ ಅಜ್ಞಾನದಿಂದ ಹೊರಬಂದ ಪ್ರಕೃತಿ ತನ್ನನ್ನು ಕಾಡುವ ಬೆಂಕಿಯಿಂದಲೂ ಹೊರ ಬಂದಿದ್ದಳು. ಬುದ್ಧನ ಬುದ್ಧಿವಂತಿಕೆಯಲ್ಲಿ ಬೆಳದಿಂಗಳನ್ನು ಸೂಸುವಂತಹ ಮಾತುಗಳು ಅವಳಲ್ಲಿನ ಬೆಂಕಿಯನ್ನು ನಂದಿಸಿದ್ದವು. ನಿದ್ರೆಯ ಅವಸ್ಥೆಯಿಂದ ಜಾಗೃತಿಗೆ ಕರೆತಂದಿದ್ದವು. ಚಾಂಡಾಲ ಕನ್ಯೆಯಾದರೂ ತನ್ನಿಂದ ನೀರು ಪಡೆದು ಕುಡಿದ ಆನಂದ ತನಗೆ ಭಿಕ್ಷುಣಿಯಾಗುವ ಅವಕಾಶ ನೀಡಿದ ಬುದ್ಧ ಅವಳ ಅಂತರಂಗದ ಕಣ್ಣುಗಳನ್ನು ತೆರೆಸಿದ್ದರು. ಹೆಣ್ಣು ಕಾಡುವ ಮಾಯೆಯಲ್ಲ. ಅವಳಿಗೂ ಪುರುಷನಿಗಿರುವಂತಹ ಆಧ್ಯಾತ್ಮಿಕ ಸಾಧನೆಗಳು ಸಾಧ್ಯ ಎಂಬುದನ್ನು ಬುದ್ಧ ಅರ್ಥ ಮಾಡಿಸಿದ್ದ.

ಮತ, ಮಾನ್ಯ ಸಂಸ್ಕೃತಿಗಳು ಕೇವಲ ನೀತಿ– ನಿಯಮ ವೇದ ಶಾಸ್ತ್ರಗಳನ್ನು ಬೋಧಿಸುವ ಸಾಂಪ್ರದಾಯಿಕ ಸಂಸ್ಥೆಗಳಾದಾಗ ಅವು ಕೊಳೆತು ನಾರುತ್ತವೆ. ಬಲವಂತದ 'ಹೊನ್ನು, ಹೆಣ್ಣು, ಮಣ್ಣು'ಗಳ ನಿಗ್ರಹದಿಂದ ಧಾರ್ಮಿಕ ಪೀಠಗಳ ಕೆಳಗೇ ಕರ್ಮಕಾಂಡಗಳಿನಂತಿಹ ಸರಳ ಮಾತುಗಳಿಂದಲೇ ಎದುರಿನವರು ಮನಸ್ಸನ್ನು ಗೆಲ್ಲಬಲ್ಲವನಾಗಿದ್ದ ಪರಿವರ್ತಿಸಲು ಸಾಧ್ಯವೆಂದು ಅರಿತಿದ್ದ. ಇಂತಹ ಎಷ್ಟೋ ಕತೆಗಳು ಇಂದು ನಮಗೆ ಬೇಕಾಗಿರುವ ಬುದ್ಧನ ಅಗತ್ಯವನ್ನು ಮತ್ತೆ ಮತ್ತೆ ಎತ್ತಿ ಹಿಡಿಯುತ್ತವೆ.

**■ ಅಮೃತಮತಿ**

## ಮಾತೇ ಮುತ್ತು

★ ಬುದ್ಧಿವಂತ ಜನರು ಸಂತೋಷವಾಗಿರುವುದು ಬಹಳ ಕಡಿಮೆ.

—ಅರ್ನೆಸ್ಟ್ ಹೆಮಿಂಗ್ವೇ

★ ಸತ್ಯ ಪ್ಯಾಂಟು ಹಾಕುವುದರೊಳಗೆ ಸುಳ್ಳು ಜಗತ್ತನ್ನು ಆರು ಬಾರಿ ಸುತ್ತಿ ಬಂದಿರುತ್ತದೆ.

—ಮಾರ್ಕ್ ಟ್ವೈನ್

★ ಜೀವನದಲ್ಲಿ ಯಾವತ್ತೂ ಪ್ರಯೋಗಗಳನ್ನು ಮಾಡದವನು ಮೂರ್ಖನೇ ಸರಿ.

—ಡಾರ್ವಿನ್

★ ಈ ಕ್ರೂರ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ನಮ್ಮ ಕಷ್ಟಗಳು ಕೂಡಾ.

—ಚಾರ್ಲಿ ಚಾಪ್ಲಿನ್

★ ನಾಲಗೆಯ ಮೇಲೆ ನಿಯಂತ್ರಣವಿಲ್ಲದ ಜ್ಞಾನಿಯ ಜ್ಞಾನ ಯಾವ ಉಪಯೋಗಕ್ಕೂ ಬರುವುದಿಲ್ಲ.

—ಸಂತ ಕಬೀರ

★ ಸೌಂದರ್ಯ ಮುಖದಲ್ಲಿಲ್ಲ; ಸೌಂದರ್ಯ ಹೃದಯದೊಳಗಿನ ಬೆಳಕು.

—ಖಲೀಲ್ ಗಿಬ್ರಾನ್

★ ಅಪಾಯಗಳಿಂದ ದೂರವಿರಿಸು ಎಂದು ಪ್ರಾರ್ಥಿಸಬೇಡ, ಅಪಾಯಗಳನ್ನು ಭಯವಿಲ್ಲದೆ ಎದುರಿಸುವ ಶಕ್ತಿ ಕೊಡು ಎಂದು ಪ್ರಾರ್ಥಿಸು.

—ರಬೀಂದ್ರನಾಥ ಠಾಗೋರ್

★ ಬೈಸಿಕಲ್ಲನ್ನು ಚೆನ್ನಾಗಿ ಕಲಿತ ಮೇಲೆ ಕೈಬಿಟ್ಟೋ ಕಾಲುಬಿಟ್ಟೋ ಸವಾರಿ ಮಾಡುವ ಪ್ರವೀಣನಂತೆ, ನುರಿತ ಮೇಲೆ ಕವಿ ಛಂದಸ್ಸನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಸ್ವಾತಂತ್ರ್ಯ ಪಡೆಯುತ್ತಾನೆ.

—ಕುವೆಂಪು

★ ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ, ನೀಡುವೆನು ರಸಿಕ ನಿನಗೆ / ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ ಆ ಸವಿಯ ಹಣಿಸು ನನಗೆ.

—ದ.ರಾ.ಬೇಂದ್ರೆ

★ ಎದೆಯಾಳದ ನೋವು ನೈಜ ಪ್ರೇಮಿಯ ಗುರುತು/ ಇನ್ನಾವ ನೋವೂ ಇಲ್ಲ ಎದೆ ನೋವಿಗಿಂತ ಮಿಗಿಲು.

—ಜಲಾಲುದ್ದೀನ್ ರೂಮಿ